**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**
**ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560 044.**

ಕರಾಸಕೈಅನಿ

***WEB : " KSSIDC.ORG "***
***E-MAIL: Kssidcho@vsnl.com***

ಸಮನ್ವಯ/ಪರಿಷ್ಕರಣೆ/ನೀರಿನ ದರ/2003-2004 ದಿನಾಂಕ: 23-02-2004

## ಕಛೇರಿ ಆದೇಶ

ವಿಷಯ:- ನೀರಿನ ದರ ಪರಿಷ್ಕರಣೆ ಮಾಡುವ ಬಗ್ಗೆ.
ಉಲ್ಲೇಖ:- ಸಮ ಸಂಖ್ಯೆಯ ಕಛೇರಿ ಆದೇಶ ದಿನಾಂಕ:-17-4-2000, 4-4-2001, 28-1-2002 ಮತ್ತು 13-02-2002.

ಉಲ್ಲೇಖದಲ್ಲಿ ತಿಳಿಸಿರುವ ಕಛೇರಿ ಆದೇಶಕ್ಕೆ ಮುಂದುವರಿದಂತೆ, ದಿನಾಂಕ 1-4-2004 ರಿಂದ 31-3-2006 ರವರೆಗೆ ನೀರಿನ ಪರಿಷ್ಕೃತ ದರ ಈ ಕೆಳಗಿನಂತಿದೆ.

I

<u>ನೀರಿನ ಮಾಪಕ (Water Meter) ಇಲ್ಲದ ಮಳಿಗೆ (ರೂ.ಗಳಲ್ಲಿ / ಪ್ರತಿ ತಿಂಗಳಿಗೆ )</u>

| ಕ್ರಮ ಸಂಖ್ಯೆ | ಮಳಿಗೆ ಮಾದರಿ | ಬೆಂಗಳೂರು / ಹುಬ್ಬಳ್ಳಿ ಮಂಗಳೂರು / ಮೈಸೂರು | ಜಿಲ್ಲಾ ಕೇಂದ್ರ ಸ್ಥಳಗಳು | ಇನ್ನಿತರ ಸ್ಥಳಗಳು |
|---|---|---|---|---|
| 1 | ಎ | 424 | 303 | 182 |
| 2 | ಬಿ | 303 | 182 | 121 |
| 3 | ಸಿ | 242 | 121 | 91 |
| 4 | ಡಿ | 145 | 91 | 61 |
| 5 | ಮಿನಿ/ಸೂಮ | 61 | 61 | 48 |

II ನೀರಿನ ಮಾಪಕ (Water Meter) ಇಲ್ಲದ ನಿವೇಶನಗಳಿಗೆ (ರೂ.ಗಳಲ್ಲಿ / ಪ್ರತಿ ತಿಂಗಳಿಗೆ)

| ಕ್ರಮ ಸಂಖ್ಯೆ | ಸ್ಥಳ | ಬೆಂಗಳೂರು / ಹುಬ್ಬಳ್ಳಿ ಮಂಗಳೂರು / ಮೈಸೂರು | ಜಿಲ್ಲಾ ಕೇಂದ್ರ ಸ್ಥಳಗಳು | ಇನ್ನಿತರ ಸ್ಥಳಗಳು |
|---|---|---|---|---|
| 1 | 100 ಚ.ಮೀ ವರೆಗೆ | 121 | 91 | 61 |
| 2 | 101 ಚ.ಮೀ ನಿಂದ 300 ಚ.ಮೀ ವರೆಗೆ | 182 | 121 | 91 |
| 3 | 301 ಚ.ಮೀ ನಿಂದ 500 ಚ.ಮೀ ವರೆಗೆ | 242 | 182 | 121 |
| 4 | 501 ಚ.ಮೀ ನಿಂದ 700 ಚ.ಮೀ ವರೆಗೆ | 303 | 242 | 182 |
| 5 | 701 ಚ.ಮೀ ನಿಂದ 1000 ಚ.ಮೀ ವರೆಗೆ | 363 | 303 | 242 |
| 6 | 1001 ಚ.ಮೀ ಮೇಲೆ | 484 | 333 | 273 |

III ನೀರಿನ ಮಾಪಕ (Water Meter) ಇರುವ ಮಳಿಗೆ / ನಿವೇಶನಗಳಿಗೆ:

*ರೂ.18.15 ಪ್ರತಿ 1000 ಲೀಟರ್‌ಗೆ ಇದ್ದು ಕನಿಷ್ಠ ರೂ.182 /- ಪ್ರತಿ ತಿಂಗಳಿಗೆ.*

IV ಜಲ ಆಧಾರಿತ ಘಟಕಗಳು ಹಾಗೂ ನಿರ್ಮಾಣದ ಉದ್ದೇಶಕ್ಕಾಗಿ ನೀರಿನ ಬಳಕೆಗೆ, ಮೇಲಿನ ದರದ ಇಮ್ಮಡಿ (ದುಪ್ಪಟ್ಟು) ದರವನ್ನು ವಸೂಲು ಮಾಡುವುದು.

V ನೀರಿನ ಮಾಪಕ ಅಳವಡಿಸಿದ್ದು ಅದು ಕಾರ್ಯನಿರ್ವಹಿಸದೇ ಇರುವ ಸಂದರ್ಭಗಳಲ್ಲಿ ಹಿಂದಿನ 6 ತಿಂಗಳ ಸರಾಸರಿ ಅಥವಾ ನೀರಿನ ಮಾಪಕ ಇಲ್ಲದ ಸಂದರ್ಭಗಳಲ್ಲಿ ವಿಧಿಸುವ ದರ ಇವುಗಳಲ್ಲಿ ಯಾವುದು ಜಾಸ್ತಿ ಇರುವುದೋ ಆ ದರದಲ್ಲಿ ನೀರಿನ ಶುಲ್ಕವನ್ನು ವಸೂಲು ಮಾಡುವುದು. ಹಾಗೆಯೇ ಅಂತಹ ನೀರಿನ ಮಾಪಕಗಳನ್ನು ಜರೂರಾಗಿ ಹಂಚಿಕೆದಾರರಿಂದ ದುರಸ್ತಿ ಮಾಡಿಸುವುದು.

VI ಹಂಚಿಕೆದಾರರು ಮೂರು ತಿಂಗಳ ಬಾಕಿಯನ್ನು ಪಾವತಿ ಮಾಡುವಲ್ಲಿ ವಿಫಲರಾದಲ್ಲಿ ನೀರಿನ ಸಂಪರ್ಕ ಕಡಿತಗೊಳಿಸುವುದು. ನಂತರದಲ್ಲಿ ಪೂರ್ತಿ ನೀರಿನ ಬಾಕಿಯನ್ನು ಬಡ್ಡಿ ಶೇ.18 ರಷ್ಟು ಪಡೆಯುವುದರೊಂದಿಗೆ, ರೂ.1000 ಗಳನ್ನು ಮರು ಸಂಪರ್ಕ ಶುಲ್ಕವನ್ನು ವಸೂಲು ಮಾಡಿದ ನಂತರವೇ, ನೀರಿನ ಸಂಪರ್ಕವನ್ನು ಪುನಃ ನೀಡುವುದು.

VII ಹೊಸ ಸಂಪರ್ಕ ನೀಡುವ ಸಂಧರ್ಭದಲ್ಲಿ ರೂ.1000 ಅನ್ನು ಸಂಪರ್ಕ ದರವಾಗಿ ಪಡೆಯುವುದು.

VIII ಮೇಲಿನ ದರಗಳು 1-4-2004 ರಿಂದ ಜಾರಿಗೆ ಬರುವುದು ಮತ್ತು ಪ್ರತಿ ಎರಡು ವರ್ಷಗಳಿಗೊಮ್ಮೆ ಸದರೀ ದರಗಳನ್ನು ಶೇಕಡಾ 10 ರಷ್ಟು ಹೆಚ್ಚಿಸುವುದು, ಅದರಂತೆ ಮುಂದಿನ ಪರಿಷ್ಕೃತ ದರ ದಿನಾಂಕ 1-4-2006 ರಿಂದ ಜಾರಿಗೆ ಬರುತ್ತದೆ. ಕಾಲಕಾಲಕ್ಕೆ ಅಂದರೆ ಪ್ರತೀ ಎರಡು ವರ್ಷಗಳಿಗೊಮ್ಮೆ ಕಛೇರಿ ಆದೇಶವನ್ನು ನಿರೀಕ್ಷಿಸದೇ, ನೀರಿನ ದರವನ್ನು ಪರಿಷ್ಕರಿಸುವುದು.

IX ಯಾವುದೇ ಕೈಗಾರಿಕಾ ವಸಾಹತುವಿನಲ್ಲಿ ಮೇಲೆ ತಿಳಿಸಿರುವ ದರದಂತೆ ನೀರಿನ ದರವನ್ನು ವಸೂಲು ಮಾಡಿದಾಗ್ಯೂ ಸಹ, ಖರ್ಚು ಹೆಚ್ಚಾದಲ್ಲಿ ಅದನ್ನು ಸರಿಹೊಂದಿಸಿಕೊಳ್ಳುವ ರೀತಿಯಲ್ಲಿ ನೀರಿನ ದರವನ್ನು ಸಂಬಂಧಪಟ್ಟ ಉಪ ಮುಖ್ಯ ವ್ಯವಸ್ಥಾಪಕರು (ಕೈವ) ಇವರು ಪರಿಷ್ಕರಿಸಿ ಅದರಂತೆ ವಸೂಲು ಮಾಡುವುದು ಮತ್ತು ತತ್ಸಂಬಂಧ ವಿಷಯದ ಬಗ್ಗೆ ಕೇಂದ್ರ ಕಛೇರಿಗೆ ತಿಳಿಸುವುದು.

X ಎಲ್ಲಾ ಉಪ ಮುಖ್ಯ ವ್ಯವಸ್ಥಾಪಕರು (ಕೈವ) ತಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಳಕೆದಾರರಿಗೆ ಪರಿಷ್ಕೃತ ದರವು ದಿನಾಂಕ 1-4-2004 (ಮುಂಗಡ ಸೂಚನೆ ನೀಡುವ ಸಲುವಾಗಿ) ದಿಂದ ಜಾರಿಗೆ ಬರುವುದೆಂದೂ ಮತ್ತು ವಿಳಂಬಿತ ಪಾವತಿ ಮೇಲೆ ಶೇ.18 ರಷ್ಟು ಬಡ್ಡಿ ಹಾಕಲಾಗುವುದೆಂಬ ವಿಷಯವನ್ನು ಸೂಕ್ತ ಸ್ವೀಕೃತಿಯೊಂದಗೆ ತಿಳಿಸಿ ಅದರಂತೆ ವಸೂಲಿ ಮಾಡುವುದು.

XI ನೀರಿನ ದರ ಲೆಕ್ಕಹಾಕುವಾಗ ಪೈಸೆಗಳು ಬಂದಲ್ಲಿ ಮೊಬಲಗನ್ನು ಮುಂದಿನ ರೂಪಾಯಿಗೆ ಪೂರ್ಣಾಂಕಗೊಳಿಸುವುದು.

ಕಾರ್ಯನಿರ್ವಾಹಕ ನಿರ್ದೇಶಕರು
ಕ.ರಾ.ಸ.ಕೈ.ಅ.ನಿ.ನಿ

23/2/2004

G/MY DOC/CIR-OO/WC REV 1-4-02-OO.WIN